O.S. No.433/2022 P.W. 1 Dated :07-08-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ - ವಾದಿ ಪರ ವಕೀಲರಾದ ಶ್ರೀ. ಟಿ ಕೆ ಕೆ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣಪತ್ರದಲ್ಲಿ ನಮೂದಿಸಿರುವ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಿರುತ್ತದೆ.

ವಂಶವೃಕ್ಷದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-1 ಎಂದು, ಸರ್ವೆ ನಂ. 47/9 ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಸರ್ವೆ ನಂ. 47/14 ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಎಂ ಆರ್ ನಂ ಹೆಚ್ 2/2018-19 ರ ದಾಖಲೆಯನ್ನು ನಿಪಿ-4 ಎಂದು ಎಂ ಆರ್ ನಂ. ಹೆಚ್ 8/2018-19 ರ ದಾಖಲೆಯನ್ನು ನಿಪಿ-5 ಎಂದು, ಸರ್ವೆ ನಂ. 47/9 ರ ಆರು ಕೈ ಬರಹದ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-6 ಎಂದು ಎಂ ಆರ್ ನಂ. 11/92-93 ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ನಮೂನೆ-5 ರ ಎರಡು ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-8 ಎಂದು, ಇಸಿ ಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರ್ತಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಜಿ ಎನ್ ವಕೀಲರಿಂದಃ

(ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಕಾರಣಗಳು ಇಲ್ಲದ ಕಾರಣ ತಿರಸ್ಕರಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.